4ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು

ಸಿ.ಸಿ ನಂ- 15051/2018 ಚಾ.ಸಾ.- 1 ಅ.ಸಾ.-1

ಪ್ರ.ವ.ಬೊ. ದಿಃ 29.08.2019

ಸಾಕ್ಷಿದಾರನ ಹೆಸರು : ಜಿ.ಪುರುಷೋತ್ತಮ್

ತಂದೆಯ ಹೆಸರು : ಜಿ.ಬಲರಾಮ

ವಯಸ್ಸು : 32 ವರ್ಷ

ಕೆಲಸ : ಖಾಸಗಿ ಕೆಲಸ

ವಾಸ : ಜಾಲಹಳ್ಳಿ, ಬೆಂಗಳೂರು

ಮುಖ್ಯ ವಿಚಾರಣೆ ಹಿ.ಸಾ.ಸ.ಅ ರವರಿಂದಃ

ನಾನು ಬೆಂಗಳೂರಿನ ಗ್ರಾಮದ ಜಾಲಹಳ್ಳಿಯ ಕೆಂಪೇಗೌಡ ಕಲ್ಯಾಣ ಮಂಟಪದ ಹಿಂಭಾಗದಲ್ಲಿರುವ ಮನೆ ನಂ.32/ಎ ರಲ್ಲಿ ಮೊದಲನೇ ಮಹಡಿ ಮನೆಯಲ್ಲಿ ವಾಸವಾಗಿದ್ದೇನೆ. ನಾನು ಬಿ.ಎಸ್ಸಿ ಕಂಪ್ಯೂಟರ್ science ಪಧವೀಧರನಾಗಿದ್ದೇನೆ. ಆರೋಪಿ Axis Migration ಹೆಸರಿನಲ್ಲಿ ಗಾಂಧೀನಗರ ಜೈನ್ ಟೆಂಪಲ್ ಬಳಿ ಇರುವ ಒಂದು ಕಛೇರಿ ನಡೆಸುತ್ತಿದ್ದು, ನಾನು ವೆಬ್‌ಸೈಟ್‌ನಲ್ಲಿ ಕೆಲಸಕ್ಕೆ search ಮಾಡುತ್ತಿರುವಾಗ ಆರೋಪಿ ನಡೆಸುತಿದ್ದ Axis Migration website ತೆಗೆದು ನೋಡಿದಾಗ ಅದರಲ್ಲಿ ವಿದೇಶದಲ್ಲಿ ಕೆಲಸ ಕೊಡಿಸುವುದಾಗಿ, job offer letter, VISA charges, accommodation, flight charges, medical expenses, other miscellaneous expenses ಸೌಲಭ್ಯಗಳನ್ನು ಒದಗಿಸಿ, ಆ ಸೇವೆಗಳಿಗೆ expenditure ಇರುವ ಬಗ್ಗೆ ವೆಬ್‌ಸೈಟ್‌ನಲ್ಲಿ ಮಾಹಿತಿ ಕೊಟ್ಟಿದ್ದರು. ಹಾಗೂ ಅದರಲ್ಲಿ ಒಂದು ಮೊಬೈಲ್ ಸಂಖ್ಯೆ ಇತ್ತು. ಸದರಿ ನಂಬರ್ 9916332229 ಇತ್ತು. ಆ ನಂಬರ್‌ಗೆ ನಾನು ಫೋನ್ ಮಾಡಿದ್ದೆ. ಆಗ ಫೋನ್‌ನಲ್ಲಿ ಮಾತನಾಡಿದಾಗ ಆರೋಪಿ ಫೋನ್ ತೆಗೆದಿದ್ದು, ನಂತರ ಆರೋಪಿ ಖುದ್ದಾಗಿ ಮನೆಗೆ ಬಂದು ವಿಷಯಗಳನ್ನು ವಿವರಿಸುತ್ತೇನೆ ಎಂದು ಹೇಳಿದ್ದು, ಮನೆ ಹತ್ತಿರ ಬಂದಿದ್ದರು. ತುಂಬಾ ಜನರನ್ನು ವಿದೇಶಕ್ಕೆ ಕಳುಹಿಸಿದ್ದೇವೆ, ಅದಕ್ಕೆ consultancy

charges ಕೊಟ್ಟರೆ ಎಲ್ಲಾ ಸೌಲಭ್ಯ ಮಾಡಿಸಿಕೊಡುತ್ತೇವೆ ಎಂದು ಹೇಳಿದರು. ನಂತರ ನಾನು ದಿಃ 24.01.2017 ರಂದು ರೂ.49,200/- ನಗದು ಹಣ ಕೊಟ್ಟಿದ್ದು, ಅಗ್ರಿಮೆಂಟ್ ಮಾಡಿಕೊಂಡಿದ್ದೆ. ನಂತರ ಫೆಬ್ರವರಿ ಮೊದಲನೇ ವಾರದಲ್ಲಿ ರೂ.37,050/-, ನಂತರ ಉಳಿದ ಹಣವನ್ನು ಫೆಬ್ರವರಿ 20 ಮತ್ತು 21, 2017 ರಂದು ಆರ್‌ಟಿಜಿಎಸ್ ಮೂಲಕ ಆರೋಪಿಯ ಖಾತೆ ಇರುವ ಸಿಂಡಿಕೇಟ್ ಬ್ಯಾಂಕಿಗೆ ನನ್ನ ಜೆ.ಪಿ.ನಗರ ಶಾಖೆಯ ಆಕ್ಸಿಸ್ ಬ್ಯಾಂಕ್ ಖಾತೆಯಿಂದ ವರ್ಗಾವಣೆ ಮಾಡಿದ್ದೆ. ಈ ರೀತಿ ನಗದು ಮತ್ತು ಆರ್‌ಟಿಜಿಎಸ್ ಮೂಲಕ ರೂ.4,10,050/- ಹಣವನ್ನು ಆರೋಪಿಗೆ ಕೊಟ್ಟಿದ್ದೇನೆ.

ಕರಾರಿನ ಪ್ರಕಾರ ಮೂರು ತಿಂಗಳ ಒಳಗೆ ಎಲ್ಲಾ ಪ್ರಕ್ರಿಯೆ ಪೂರ್ಣಗೊಳಿಸಿ ಕೆಲಸ ಕೊಡಿಸುವುದಾಗಿ ಆಶ್ವಾಸನೆ ನೀಡಿರುತ್ತಾರೆ.

ಈ ಹಂತದಲ್ಲಿ ಮಾನ್ಯ ಹಿ.ಸ.ಸ.ಅ ಅವರ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4ನೇ ಅ ಮು ಮ ದಂ, ಬೆಂಗಳೂರು

ಸಾಕ್ಷಿಯನ್ನು ಈ ದಿನಾಂಕಃ 16.10.2019 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.
ಮುಂದುವರಿದ ಮುಖ್ಯ ವಿಚಾರಣೆ ಹಿ.ಸ.ಸ.ಅ ರವರಿಂದಃ

ಸಾಕ್ಷಿ ಮುಂದುವರೆದು ನಿನ್ನ ಕೆಲಸಕ್ಕೆ ಸಂಬಂಧಪಟ್ಟಂತೆ process delay ಆಗಿದೆ, ನಿನಗೆ ಮೇ 2017 ರಿಂದ ಆಗಸ್ಟ್ 2017 ರ ಒಳಗೆ VISA ಬರುತ್ತದೆ ಹಾಗೂ ಕೆಲಸ ಕೊಡಿಸುತ್ತೇವೆ ಎಂದು ಹೇಳಿರುತ್ತಾರೆ. ಆರೋಪಿ ನನ್ನಿಂದ ಹಣ ಪಡೆದ ನಂತರ offer letter ನೀಡಿರುತ್ತಾರೆ. ಸೆಪ್ಟಂಬರ್ 2017 ರಂದು ನಾನು ಆರೋಪಿಯ ಕಛೇರಿಗೆ ಹೋಗಿ VISA ಬಗ್ಗೆ ವಿಚಾರಿಸಿದ್ದು, VISA cancel ಆಗಿದೆ ಎಂದು ಹೇಳಿದ್ದು, ನನ್ನ ಬಳಿ ಯಾವುದೇ ಪಾಸ್‌ಪೋರ್ಟ್ ಅಥವಾ ಗುರುತಿನ ಚೀಟಿ ಪಡೆದಿಲ್ಲ, ನನ್ನನ್ನು VISA interview ಗೆ ಸಹ ಕರೆದುಕೊಂಡು ಹೋಗಿಲ್ಲ. ನಂತರ ನಾನು ಆರೋಪಿಗೆ ಕರಾರಿನ ಪ್ರಕಾರ ಕೆಲಸ ಕೊಡಿಸಿರುವುದಿಲ್ಲ, ಆ ಕಾರಣ ನನ್ನಿಂದ ಪಡೆದ ಹಣವನ್ನು ವಾಪಸ್ಸು ಕೊಡಲು ಕೇಳಿದೆ. ನಂತರ ದಿಃ 21.09.2017 ರಂದು ಆರೋಪಿ ನನ್ನ ಆಕ್ಸಿಸ್ ಬ್ಯಾಂಕ್, ಜೆ.ಪಿ.ನಗರ ಶಾಖೆಯ ಖಾತೆಗೆ ರೂ.70,000/- ಹಣವನ್ನು ಆರೋಪಿಯ ಸಿಂಡಿಕೇಟ್ ಬ್ಯಾಂಕ್ ಖಾತೆ ಗಾಂಧಿನಗರ ಶಾಖೆಯಿಂದ ಆರ್‌ಟಿಜಿಎಸ್ ಮೂಲಕ ನನಗೆ ಹಿಂತಿರುಗಿಸಿರುತ್ತಾರೆ. ಉಳಿದ ರೂ.3,40,050/- ಹಣವನ್ನು ಅಕ್ಟೋಬರ್ ಕೊನೆಯ ವಾರ 2017 ರಲ್ಲಿ ಹಿಂತಿರುಗಿಸುವುದಾಗಿ ಆರೋಪಿ ತಿಳಿಸಿದ್ದರು. ನಂತರ ನಾನು ಅಕ್ಟೋಬರ್ ಕೊನೆಯ ವಾರದಲ್ಲಿ ಆರೋಪಿ ಕಛೇರಿಗೆ ಹೋಗಿ ವಿಚಾರ ಮಾಡಿದಾಗ ತನ್ನ ಬಳಿ ಹಣ ಇಲ್ಲ, ನವೆಂಬರ್ ತಿಂಗಳಲ್ಲಿ ಕೊನೆಯ ವಾರದಲ್ಲಿ ಚೆಕ್ ಮೂಲಕ ಪಾವತಿಸುವುದಾಗಿ ಆರೋಪಿ ಹೇಳಿದ್ದರು. ನಂತರ ನವೆಂಬರ್ ಕೊನೆಯ ವಾರದಲ್ಲಿನಾನು ಆರೋಪಿಯ ಕಛೇರಿಗೆ ಹೋಗಿ ವಿಚಾರ ಮಾಡಿದಾಗ ಆರೋಪಿ ಕಛೇರಿ ಖಾಲಿ ಮಾಡಿಕೊಂಡು, ನಾಮಫಲಕವನ್ನು ತೆಗೆದು ಹೋಗಿದ್ದರು. ನಂತರ ಆರೋಪಿಗೆ ದೂರವಾಣಿ ಕರೆ ಮಾಡಿದಾಗ ಆರೋಪಿ ತನ್ನ ಮೊಬೈಲ್ ಫೋನನ್ನು ಸ್ವಿಚ್ ಆಫ್ ಮಾಡಿಕೊಂಡಿದ್ದರು. ನಂತರ ನಾನು ಆರೋಪಿಗೆ ಹಣವನ್ನು ಹಿಂತಿರುಗಿಸುವಂತೆ ಇ-ಮೇಲ್ ಕಳುಹಿಸಿದ್ದು, ಆರೋಪಿ ತಾನು ತಮಿಳುನಾಡಿನಲ್ಲಿ ಇದ್ದು, ವಾಪಸ್ಸು ಬಂದ ನಂತರ ಕೊಡುತ್ತೇನೆ ಎಂದು ಹೇಳಿದ್ದರು. ಇದೇ ರೀತಿ ಆರೋಪಿ ಮುಂದೂಡುತ್ತಾ ಯಾವುದೇ ಪ್ರತಿಕ್ರಿಯೆ ನೀಡದೇ

ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದು, ಡಿಸೆಂಬರ್ 31 ರಂದು ನಾನು ಪುನಃ ಇ-ಮೇಲ್ ಕಳುಹಿಸಿದ್ದೆ. ಜನವರಿ ಮೊದಲನೇ ವಾರದಲ್ಲಿ ಹಿಂತಿರುಗಿಸುವುದಾಗಿ ಇ-ಮೇಲ್‌ಗೆ ಉತ್ತರ ಕೊಟ್ಟಿದ್ದರು. ನಂತರ ಆರೋಪಿ ಯಾವುದೇ ರೀತಿಯ ಪ್ರತಿಕ್ರಿಯೆ ನೀಡದೇ ಹಣವನ್ನು ಹಿಂತಿರುಗಿಸಿಲ್ಲ. ನಂತರ ಬೇರೆಯವರಿಂದ ಮಾಹಿತಿ ಬಂದಿದ್ದು, ಇದೇ ರೀತಿ ನನ್ನ ಹಾಗೆ ಹಲವಾರು ಜನರ ಬಳಿ ಕೆಲಸ ಕೊಡಿಸುವುದಾಗಿ ಹೇಳಿ ರೂ.1 ಕೋಟಿ ಸುಮಾರು ಹಣ ಪಡೆದು ಮೋಸ ಮಾಡಿದ್ದು, ವಿದೇಶಕ್ಕೆ ಹೋಗುವ ತಯಾರಿಯಲ್ಲಿದ್ದಾರೆ ಎಂದು ತಿಳಿದುಬಂತು. ಆರೋಪಿ ನಮ್ಮ ಬಳಿ ವ್ಯವಹಾರ ಮಾಡುವಾಗ ಅವರ ಕಛೇರಿ ತಮಿಳುನಾಡು, ಚೆನ್ನೈ, ಪುಣೆಯಲ್ಲಿರುವುದಾಗಿ ತಿಳಿಸಿದ್ದು, ನಾವು ವಿಚಾರ ಮಾಡಲಾಗಿ ಅಲ್ಲಿ ಯಾವುದೇ ಕಛೇರಿ ಇರಲಿಲ್ಲ. ಆರೋಪಿಯ ವಿರುದ್ಧ ಬೆಂಗಳೂರಿನ ಹಲವಾರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುವುದು ತಿಳಿದುಬಂತು. ನಾನು ಕೆಲಸ ಮಾಡುತ್ತಿದ್ದ ಸಂಸ್ಥೆಯ ಕೆಲಸ ಬಿಟ್ಟಿದ್ದು, ನನ್ನ ಬಳಿ ಆರೋಪಿ ಪಡೆದುಕೊಂಡ ಹಣವನ್ನು ಕೇಳಿದಾಗ ನನಗೆ ಹಣ ಕೊಡದೇ ಮೋಸ ಮಾಡಿದ್ದಾರೆ. ಈ ವಿಚಾರವಾಗಿ ನಾನು ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದೇನೆ. ದೂರನ್ನು ಸಾಕ್ಷಿ ಗುರುತಿಸಿದ್ದು ನಿ.ಪಿ.1 (5 ಪುಟಗಳು) ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ನಂತರ ಪೊಲೀಸರು ಕೃತ್ಯ ನಡೆದ ಸ್ಥಳಕ್ಕೆ ಬಂದು ಪಂಚನಾಮೆ ಜರುಗಿಸಿದ್ದರು. ಸ್ಥಳ ಪಂಚನಾಮೆಯನ್ನು ನಿಪಿ.2 ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ನಾನು ತನಿಖಾ ಕಾಲದಲ್ಲಿ ತನಿಖಾಧಿಕಾರಿಗಳಿಗೆ ಕೆಳಕಂಡ ದಾಖಲಾತಿಗಳನ್ನು ನೀಡಿದ್ದೇನೆ.

ಈ ಹಂತದಲ್ಲಿ ದಾಖಲಾತಿಗಳನ್ನು ಹಾಜರುಪಡಿಸಲು ಸಮಯ ಕೋರಿದ್ದು, ಮುಂದುವರೆದ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4ನೇ ಅ ಮು ಮ ದಂ, ಬೆಂಗಳೂರು